ಕರ್ನಾಟಕ ಸರ್ಕಾರ

ಸೆಪ್ಟೆಂಬರ್ 13, 2017

# ಕರ್ನಾಟಕ ಎಲೆಕ್ಟ್ರಿಕ್ ವೆಹಿಕಲ್ ಅಂಡ್ ಎಜರ್ನಿ ಸ್ಟೋರೇಜ್ ಪಾಲಿಸಿಗೆ ಸಂಪುಟ ಅನುಮೋದನೆ : ಟಿ ಬಿ ಜಯಚಂದ್ರ

**ಬೆಂಗಳೂರು, ಸೆಪ್ಟೆಂಬರ್ 13:**

ಒಂದೆಡೆ ನೈಮಲ್ಯ ತಡೆಗೆ ಉತ್ತೇಜಿಸಲು ಮತ್ತೊಂದೆಡೆ ಪರಿಸರ–ಸ್ನೇಹಿ ವಾತಾವರಣ ನಿರ್ಮಿಸಲು ಪ್ರೇರಕವಾಗುವ ಹಾಗೂ ಮಗದೊಂದೆಡೆ ವಿದ್ಯುತ್ ಚಾಲಿತ ವಾಹನಗಳನ್ನು ಜನಪ್ರಿಯಗೊಳಿಸಿ ಇಂಧನದ ಬಳಕೆಯನ್ನು ತೀವ್ರವಾಗಿ ಕಡಿತಗೊಳಿಸಲು ಪೂರಕವಾಗುವ ಕರ್ನಾಟಕ ಎಲೆಕ್ಟ್ರಿಕ್ ವೆಹಿಕಲ್ ಅಂಡ್ ಎಜರ್ನಿ ಸ್ಟೋರೇಜ್ ಪಾಲಿಸಿಗೆ ಸಂಪುಟ ಅನುಮೋದನೆ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯ ನಂತರ ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ. ಬಿ. ಜಯಚಂದ್ರ ಅವರು ಈ ವಿಷಯವನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ಇತ್ತೀಚಿನ ದಿನಗಳಲ್ಲಿ ಎಲ್ಲಾ ಪ್ರಮುಖ ನಗರಗಳಲ್ಲಿ ಸಂಚಾರ ದಟ್ಟಣೆಯಿಂದ ಉಂಟಾಗುತ್ತಿರುವ ನೈರ್ಮಲ್ಯ ಸಮಸ್ಯೆಗೆ ಸಂಪುಟದ ಈ ಕ್ರಮ ಕಡಿವಾಣ ಹಾಕಲಿದೆ. ಅಲ್ಲದೆ, ವಿದ್ಯುತ್ ಚಾಲಿತ ವಾಹನಗಳ ಬಳಕೆಗೆ ಮತ್ತಷ್ಟು ಉತ್ತೇಜನ ದೊರೆಯಲಿದೆ.

## ಏತ ನೀರಾವರಿ ಯೋಜನಗೆ ಅನುಮೋದನೆ

ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕುಗಳ ಕೆರೆಗಳಿಗೆ ಕುಡಿಯುವ ನೀರಿನ ಸರಬರಾಜು ಮಾಡಲು ತುಂಗಭದ್ರಾ ನದಿ ಮೂಲಕ 290 ಕೋಟಿ ರೂ ಏತ ನೀರಾವರಿ ಯೋಜನೆಗೆ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ

### ಏಕ ರೂಪ ಕಾನೂನು ಜಾರಿಗೆ : ಕಾನೂನು ಶಾಲೆಯ ಅಂಗಳಕ್ಕೆ

ಕರ್ನಾಟಕ ನಗರ ಸಭೆ ಅಧಿನಿಯಮ 1964 ಹಾಗೂ ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮ 1976 ಹಾಗೂ ಇತರ ನಗರ ಕಾಯಿದೆಗಳನ್ನು ಕ್ರೋಢೀಕರಿಸಿ ಸೂಕ್ತ ತಿದ್ದುಪಡಿಗಳನ್ನು ತಂದು ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಏಕ ರೂಪ ಕಾನೂನು ಜಾರಿಗೆ ತರಲು ಸಾಧಕ–ಬಾಧಕಗಳ ಪರಿಶೀಲಿಸಿ ವರದಿ ಸಲ್ಲಿಸುವಂತೆ ಭಾರತೀಯ ರಾಷ್ಟ್ರೀಯ ಕಾನೂನು ಶಾಲಾ ವಿಶ್ವವಿದ್ಯಾಲಯದ ( ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ) ಅಂಗಳಕ್ಕೆ ವರ್ಗಾಯಿಸಿ ಅಭಿಪ್ರಾಯ ಪಡೆಯಲು ಸಂಪುಟ ನಿರ್ಧರಿಸಿದೆ. ಕಾನೂನು ಶಾಲಾ ವಿಶ್ವವಿದ್ಯಾಲಯದ ಸಲಹಾ ವರದಿ ಸ್ವೀಕೃತವಾದ ನಂತರ ಸಚಿವ ಸಂಪುಟದ ಸನ್ನಿಹಿತ ಸಭೆಯಲ್ಲಿ ಮಂಡಿಸಿ ಅಗತ್ಯ ಕ್ರಮ ಕೈಗೊಳ್ಳಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.

### ವರ್ತುಲ ರಸ್ತೆಗಳ ಅಭಿವೃದ್ಧಿಗೆ ಮೇಲ್ವಿಚಾರಣಾ ಸಮಿತಿ ರಚನೆ

ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಗರ ಯೋಜನಾ ಕಾರ್ಯ ವಿಧಾನದ ಮೂಲಕ ವರ್ತುಲ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಹಾಗೂ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಅಧ್ಯಯನಾ ವರದಿ ಸಿದ್ದಪಡಿಸಿ ಸಲ್ಲಿಸಲು ನಗರಾಬಿವೃದ್ಧಿ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮೇಲ್ವಿಚಾರಣಾ ಸಮಿತಿ ರಚಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಆರ್ಥಿಕ ಇಲಾಖೆ ಹಾಗೂ ಯೋಜನಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು, ಪೌರಾಡಳಿತ ಇಲಾಖೆಯ ನಿರ್ದೇಶಕರು, ನಗರ ಗ್ರಾಮಾಂತರ ಯೋಜನೆಯ ನಿರ್ದೇಶಕರು, ಕರ್ನಾಟಕ ನಗರ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರನ್ನು ಒಳಗೊಂಡ ಈ ಸಮಿತಿಯು ಮುಂದಿನ ಐದು ವರ್ಷಗಳಲ್ಲಿ ರಾಜ್ಯದ 25 ಪ್ರಮುಖ ನಗರಗಳ ಸಮಗ್ರ ಸಮೀಕ್ಷೆ ನಡೆಸಿ, ಅಗತ್ಯ ಕುರಿತು ಮೇಲ್ವಿಚಾರಣೆ ಮಾಡಿ, ಕ್ರೋಢೀಕೃತ ವರದಿಯನ್ನು ಸಲ್ಲಿಸಲಿದೆ. ಜಿಲ್ಲಾ ಕೇಂದ್ರಗಳಾಗಿರುವ ರಾಜ್ಯ 25 ಪ್ರಮುಖ ನಗರಗಳನ್ನು ಸಮೀಕ್ಷೆ ನಡೆಸಿ ಹಾಗೂ ಮಾಹಿತಿ ಕ್ರೋಢೀಕರಣಕ್ಕೆ 56 ಕೋಟಿ ರೂ, ನಗರ ಯೋಜನಾ ಕಾರ್ಯಕ್ರಮಗಳ ತಯಾರಿಕಾ ವೆಚ್ಚ

**169 ಕೋಟಿ ರೂ ಹಾಗೂ ಯೋಜನೆ ಮೇಲ್ವಿಚಾರಣಾ ಮತ್ತು ಆಡಳಿತಾತ್ಮಕ ವೆಚ್ಚ 50 ಕೋಟಿ ರೂ ಒಳಗೊಂಡ ಈ ಕಾರ್ಯಕ್ಕೆ 275 ಕೋಟಿ ರೂ ಮಂಜೂರು ಮಾಡಿ ಸಂಪುಟ ಸಮ್ಮತಿಸಿದೆ.**

**ರಸ್ತೆ ಅಭಿವೃದ್ಧಿಗೆ ಅನುಮೋದನೆ**

**ರಾಜ್ಯದ ರಾಜಧಾನಿಯಲ್ಲಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಹಿತದೃಷ್ಟಿಯಿಂದ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಮೂಲಕ ಬೆಂಗಳೂರು ಸುತ್ತ-ಮುತ್ತಲಿನ 155 ಕಿ ಮೀ ಉದ್ದದ ನಾಲ್ಕು ಪ್ರಮುಖ ರಸ್ತೆಗಳನ್ನು 2095 ಕೋಟಿ ರೂ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ. ಹೊಸಕೋಟೆ-ಬೂದಿಗೆರೆ-ಮೈಲನಹಳ್ಳಿ-ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆ ಒಳಗೊಂಡ 22 ಕಿ ಮೀ ದ್ವಿ-ಪಥ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ 420 ಕೋಟಿ ರೂ, ನೆಲಮಂಗಲ-ಚಿಕ್ಕ ಮಧುರೆ-ಬ್ಯಾತ-ರಾಜಾನುಕುಂಟೆ ರಸ್ತೆ - ತಿಮ್ಮಸಂದ್ರ-ದೇವನಹಳ್ಳಿ ಬಳಿಯ ಎಂ ವಿ ಸೋಲಾರ್ ರಸ್ತೆ ಒಳಗೊಂಡಂತೆ 43.5 ಕಿ ಮೀ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ 505 ಕೋಟಿ ರೂ, ಆನೇಕಲ್-ಅತ್ತಿಬೆಲೆ-ಸರ್ಜಾಪುರ-ವರ್ತೂರು-ಹೊಸಕೋಟೆ ರಸ್ತೆ ಒಳಗೊಂಡಂತೆ 45 ಕಿ ಮೀ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ 545 ಕೋಟಿ ರೂ ಹಾಗೂ ಹಾರೋಹಳ್ಳಿ-ಹುರುಗನದೊಡ್ಡಿ- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರಸ್ತೆ- ಜಿಗಣಿ-ಆನೇಕಲ್ ರಸ್ತೆ ಒಳಗೊಂಡಂತೆ 47.5 ಕಿ ಮೀ ಅಭಿವೃದ್ಧಿ ಕಾಮಗಾರಿಗಳಿಗೆ 625 ಕೋಟಿ ರೂ ಸೇರಿದಂತೆ ಒಟ್ಟಾರೆ 2095 ಕೋಟಿ ರೂ ಅಂದಾಜು ವೆಚ್ಚಕ್ಕೆ ಸಂಪುಟ ಒಪ್ಪಿಗೆ ನೀಡಿದೆ.**

**ನೇರ ನೇಮಕಾತಿಗೆ ಸಮ್ಮತಿ**

**ರಾಜ್ಯ ಅರಣ್ಯ ಇಲಾಖೆಯಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಶ್ಲಾಘನೀಯ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಅರಣ್ಯ ರಕ್ಷಕರು, ಅರಣ್ಯ ವೀಕ್ಷಕರು ಹಾಗೂ ಉಪ ವಲಯ ಅರಣ್ಯಾಧಿಕಾರಿಗಳು ಎಂಬ ಪದನಾಮದ ಸಿ ಮತ್ತು ಡಿ ಗುಂಪಿನ 125 ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಅರಣ್ಯ ರಕ್ಷಕರು, ಅರಣ್ಯ ವೀಕ್ಷಕರು ಉಪ ವಲಯ ಅರಣ್ಯಾಧಿಕಾರಿಗಳು ಹಾಗೂ ಅರಣ್ಯ ವೀಕ್ಷಕರ ಬಾಕಿ ಇರುವ 54 ಹುದ್ದೆಗಳಿಗೆ ಇದೀಗ ವಿಶೇಷ ನಿಯಮಗಳ ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲು ಸಂಪುಟ ಸಮ್ಮತಿಸಿದೆ.**

## ಆಸ್ಪತ್ರೆಯ ಆಧುನೀಕರಣಕ್ಕೆ ಅನುಮೋದನೆ

ಗದಗ ನಗರದಲ್ಲಿ 100-ಹಾಸಿಗೆಗಳ ಸಾಮರ್ಥ್ಯವುಳ್ಳ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಆಧುನೀಕರಣ ಹಾಗೂ ಕಾಮಗಾರಿಯಲ್ಲಿನ ಪರಿಷ್ಕೃತ ಗುತ್ತಿಗೆ ಮೊತ್ತವನ್ನು 5.08 ಕೋಟಿ ರೂ ಗಳಿಗೆ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

## 765 ಕೋಟಿ ರೂ ಅವಧಿ ಸಾಲಕ್ಕೆ ಪ್ರತಿ ಖಾತರಿ

ಪ್ರಸಕ್ತ ಸಾಲಿನಲ್ಲಿ ಆಂತರಿಕ ಹಾಗೂ ಹೆಚ್ಚುವರಿ ಆಯವ್ಯಯ ಸಂಪನ್ಮೂಲದಡಿಯಲ್ಲಿ ಕರ್ನಾಟಕ ನೀರಾವರಿ ನಿಗಮಕ್ಕೆ ಅವಧಿ ಸಾಲ 765 ಕೋಟಿ ರೂ ಸಂಗ್ರಹಿಸಲು ಸರ್ಕಾರ ಪ್ರತಿ ಖಾತರಿ ನೀಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

## ಸೇತುವೆ-ಹಾಗೂ-ಬಾಂದಾರ ನಿರ್ಮಾಣಕ್ಕೆ ಅನುಮೋದನೆ

ಯಾದಗಿರಿ ಜಿಲ್ಲೆಯ ಭೀಮಾ ನದಿ ಪಾತ್ರದ ಜೋಳದಡಗಿ-ಗೂಡೂರು ಬ್ಯಾರೇಜ್ ಪುನಶ್ಚೇತನ ಮತ್ತು ಯಾಂತ್ರಿಕ ಕಾರ್ಯಾಚರಣಾ ದ್ವಾರಗಳನ್ನು ಅಳವಡಿಸುವ ಅಂದಾಜು 57 ಕೋಟಿ ರೂ ವೆಚ್ಚದ ಯೋಜನೆಗೆ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಅಂತೆಯೇ, ಯಾದಗಿರಿಯಲ್ಲಿ ಸೇತುವೆ-ಹಾಗೂ-ಬಾಂದಾರ ( ಬ್ರಿಡ್ಜ್-ಕಂ-ಬ್ಯಾರೇಜ್ ) ನಿರ್ಮಾಣ ಹಾಗೂ ಯಾಂತ್ರೀಕೃತ ದ್ವಾರಗಳ ಅಳವಡಿಕೆಗೆ ಅಂದಾಜು 58 ಕೋಟಿ ರೂ ವೆಚ್ಚದ ಯೋಜನೆಗೆ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

## ಕಿರು ಜಲ ವಿದ್ಯುತ್ ಯೋಜನೆ ಸ್ಥಾಪನೆಗೆ ಜಮೀನು

ದಾವಣಗೆರೆ ತಾಲ್ಲೂಕಿನ ಶಾಮನೂರು ಗ್ರಾಮದಲ್ಲಿ ಮೆ : ಮಾನಸ ಸರೋವರ ಪವರ್ ಪ್ರೈವೇಟ್ ಲಿಮಿಟೆಡ್‌ಗೆ ಕಿರು ಜಲ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಗುತ್ತಿಗೆ ಆಧಾರದ ಮೇರೆಗೆ 1.05 ಎಕರೆ ಜಮೀನು ಮಂಜೂರು ಮಾಡಲು ಸಂಪುಟ ಒಪ್ಪಿಗೆ ನೀಡಿದೆ.

## ದುರಸ್ತಿ ಕಾಮಗಾರಿಗಳಿಗೆ 25 ಕೋಟಿ ರೂ ಮಂಜೂರು

ಧಾರವಾಡ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಶತಮಾನೋತ್ಸವ ಸಂಭ್ರಮದ ಹಿನ್ನೆಲೆಯಲ್ಲಿ ಕಟ್ಟಡ ನವಿಕರಣ ಮತ್ತು ದುರಸ್ತಿ ಕಾಮಗಾರಿಗಳಿಗೆ 25 ಕೋಟಿ ರೂ ಮಂಜೂರು ಮಾಡಲು ಸಂಪುಟ ಸಮ್ಮತಿಸಿದೆ.

## ಜಿಂದಾಲ್‌ಗೆ ಭೂಮಿ ಮಂಜೂರು

ಬಳ್ಳಾರಿ ಜಿಲ್ಲೆಯ ತೋರಣಗಲ್‌ನಲ್ಲಿರುವ ಜಿಂದಾಲ್ ಸ್ಟೀಲ್ ವರ್ಕ್ಸ್ ( ಜೆ ಎಸ್ ಡಬ್ಲ್ಯೂ ) ಉಕ್ಕು ಕಾರ್ಖಾನೆಯ ನೀರು ಸಂಗ್ರಹಣಾ ಯೋಜನೆಗೆ ಪೂರಕವಾಗುವಂತೆ ಹೊಸಪೇಟೆ ತಾಲ್ಲೂಕಿನ ಗೋನಾಳು ಗ್ರಾಮದಲ್ಲಿ 715.58 ಎಕರೆ ಭೂ-ಸ್ವಾಧೀನಗೊಂಡು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಈಗಾಗಲೇ ಮಂಜೂರಾಗಿರುವ ಪ್ರದೇಶದ ಮಧ್ಯಭಾಗದಲ್ಲಿನ 77.93 ಎಕರೆ ಸರ್ಕಾರಿ ಭೂಮಿಯನ್ನು ಜಲಾಶಯವನ್ನು ನಿರ್ಮಿಸಿ ಬೇಸಿಗೆಯಲ್ಲಿ ನೀರು ಸಂಗ್ರಹಿಸಡಲು ಪ್ರತಿ ಎಕರೆಗೆ ಆರು ಲಕ್ಷ ರೂ ನಂತೆ ಮಂಜೂರು ಮಾಡಲು ರಾಜ್ಯ ಸಂಪುಟ ಒಪ್ಪಿಗೆ ಸೂಚಿಸಿದೆ.

## ಕೈಗಾರಿಕಾ ಉದ್ದೇಶಕ್ಕೆ ಜಮೀನು

ಬಸವನದುರ್ಗ ಮತ್ತು ಹಾರುವನ ಹಳ್ಳಿ ಗ್ರಾಮಗಳ ವಿವಿಧ ಸರ್ವೇ ನಂಬರ್‌ಗಳಲ್ಲಿರುವ 27.03 ಎಕರೆ ಜಮೀನನ್ನು ಹೊಸಪೇಟೆಯ ಕೆ ಬಿ ಸ್ಟೀಲ್ ಪ್ರೈವೇಟ್ ಲಿಮಿಟೆಡ್‌ಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮೂಲಕ ಕೈಗಾರಿಕಾ ಉದ್ದೇಶಕ್ಕೆ ಮಂಜೂರು ಮಾಡಲು ಸಂಪುಟ ಅನುಮೋದನೆ ನೀಡಿದೆ.

## ಸಾರವರ್ಧಿತ ಅಕ್ಕಿ ಬಳಕೆಗೆ ಅನುಮತಿ

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಮಧ್ಯಾಹ್ನದ ಉಪಾಹಾರ ಯೋಜನೆಯಡಿ ಕೋಲಾರ, ಚಾಮರಾಜ ನಗರ, ಕೊಪ್ಪಳ ಮತ್ತು ಬೆಳಗಾವಿ ಜಿಲ್ಲೆಗಳ ವಿಕೇಂದ್ರೀಕೃತ ಅಡುಗೆ ಕೇಂದ್ರಗಳಲ್ಲಿ ಸಾರವರ್ಧಿತ ಅಕ್ಕಿಯನ್ನು ಬಳಸಲು ರಾಜ್ಯ ಸಚಿವ ಸಂಪುಟ ಅನುಮತಿ ನೀಡಿದೆ.

ಅಲ್ಲದೆ, ಇದಕ್ಕೆ ಅಗತ್ಯವಿರುವ ಮೂಲ ಸೌಲಭ್ಯ ಸ್ಥಾಪನೆಗೆ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ 25 ಕೋಟಿ ರೂ ಮಂಜೂರು ಮಾಡಲು ಸಮ್ಮತಿಸಿದೆ. ಈ ಯೋಜನೆಯ ಲಾಭ 10.5 ಲಕ್ಷ ಮಕ್ಕಳಿಗೆ ಲಭಿಸಲಿದೆ.

## ಗಣಕ-ಮುದ್ರಕಗಳ ಖರೀದಿಗೆ ಅನುಮೋದನೆ

ಅಂತೆಯೇ, ಪದವಿ-ಪೂರ್ವ ಶಿಕ್ಷಣ ಇಲಾಖೆಯಲ್ಲಿ ಗಣಕಗಳು (ಕಂಪ್ಯೂಟರ್‌ಗಳು), ಮುದ್ರಕಗಳು ( ಪ್ರಿಂಟರ್‌ಗಳು), ನಿರಂತರ ವಿದ್ಯುತ್ ಪೂರೈಕೆ ಯಂತ್ರ (ಅನ್ ಇಂಟರಪ್ಟೆಡ್ ಪವರ್ ಸಪ್ಲೈ) ಮತ್ತು

ಇತರೆ ಅಗತ್ಯ ಪರಿಕರಗಳನ್ನು ಖರೀದಿಸಲು 8.72 ಕೋಟಿ ರೂ ಪರಿಷ್ಕೃತ ಪ್ರಸ್ತಾವನೆಗೆ ಸಂಪುಟ ಅನುಮೋದನೆ ನೀಡಿದೆ.

**ನಾಲ್ಕನೇ ರಾಜ್ಯ ಹಣಕಾಸು ಆಯೋಗದ ಅವಧಿ ವಿಸ್ತರಣೆ**

ನಾಲ್ಕನೇ ರಾಜ್ಯ ಹಣಕಾಸು ಆಯೋಗದ ಅವಧಿಯನ್ನು ಮೂರು ತಿಂಗಳವರೆಗೆ ಅಂದರೆ ಪ್ರಸಕ್ತ ಸಾಲಿನ ಅಕ್ಟೋಬರ್ 1 ರಿಂದ ಡಿಸೆಂಬರ್ 31 ರವರೆಗೆ ವಿಸ್ತರಿಸಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

**ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ಅನುಮೋದನೆ**

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ತರಲು ಸಂಪುಟ ಅನುಮೋದನೆ ನೀಡಿದೆ.

**ಕಟ್ಟಡಗಳ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ**

ಬೆಂಗಳೂರು ನಗರದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಆವರಣದಲ್ಲಿ ಹೊಸ ವೈದ್ಯಕೀಯ ಕಾಲೇಜು ಹಾಗೂ ಹಾಜಿ ಸರ್ ಇಸ್ಮೈಲ್ ಸೇಠ್ ಘೋಷಾ ಆಸ್ಪತ್ರೆಯ ಆವರಣದಲ್ಲಿ ಬಾಲಕಿಯರ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು 197.54 ಕೋಟಿ ರೂ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

**ಈಡಿಗರ ಸಂಘಕ್ಕೆ ಜಮೀನು**

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲುಕು ಕಸಬಾ ಹೋಬಳಿಯ ಹಿರೇಶಕುನ ಗ್ರಾಮದ 4.38 ಎಕರೆ ಗೋಮಾಳ ಜಮೀನನ್ನು ಸೊರಬ ತಾಲ್ಲೂಕು ಆರ್ಯ ಈಡಿಗರ (ದೀವರ) ಸಂಘಕ್ಕೆ ಶಿಕ್ಷಣ ಸಂಸ್ಥೆ, ವಿದ್ಯಾರ್ಥಿ ನಿಲಯ ಹಾಗೂ ಸಮುದಾಯ ಭವನ ಸ್ಥಾಪಿಸಲು ಮಾರ್ಗಸೂಚಿ ದರದ ಶೇಕಡಾ 10 ರಷ್ಟು ಮೊತ್ತಕ್ಕೆ ಮಂಜೂರು ಮಾಡಲು ಸಂಪುಟ ಒಪ್ಪಿಗೆ ನೀಡಿದೆ.

**ವೆಂಟೆಡ್ ಬ್ಯಾರೇಜ್ ನಿರ್ಮಾಣಕ್ಕೆ ಅನುಮೋದನೆ**

ಕಾರವಾರ ಮತ್ತು ಅಂಕೋಲ ಪಟ್ಟಣಗಳು ಹಾಗೂ ಮಾರ್ಗ ಮಧ್ಯದ ಹಳ್ಳಿಗಳು ಮತ್ತು ಸೀ ಬರ್ಡ್ ಯೋಜನೆಗಳಿಗೆ ನೀರು ಸರಬರಾಜು ಮಾಡಲು ಗಂಗಾವಳಿ ನದಿಗೆ ಅಡ್ಡಲಾಗಿ

158.62 ಕೋಟಿ ರೂ ಅಂದಾಜು ವೆಚ್ಚದಲ್ಲಿ ವೆಂಟೆಡ್ ಬ್ಯಾರೇಜ್ ನಿರ್ಮಾಣ ಮಾಡಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

**ಸ್ಮಾರ್ಟ್ ಸಿಟಿ ಯೋಜನೆ ರೂಪಿಸಲು ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ**

ಸ್ಮಾರ್ಟ್ ಸಿಟಿ ಅಭಿಯಾನದಡಿಯಲ್ಲಿ ಸೃಜಿಸಲಾಗಿರುವ ವಿಶೇಷ ಉದ್ದೇಶಿತ ವಾಹಕ ( ಸ್ಪೆಷಲ್ ಪರ್ಪಸ್ ವೆಹಿಕಲ್ ) ಗಳಿಗೆ ಅಧಿಕಾರ ಪ್ರತ್ಯಾಯೋಜಿಸಲು ಅನುಷ್ಠಾನ ಹಾಗೂ ಪರಿಶೀಲನೆಗೆ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ.

ರಾಜ್ಯದ ಹಣಕಾಸು ಪಾಲು ಇದ್ದರೂ, ಈ ವರೆಗೆ ಕೇಂದ್ರ ಸರ್ಕಾರವೇ ಯೋಜನೆಗಳನ್ನು ರೂಪಿಸುತ್ತಿತ್ತು. ಯೋಜನೆಗಳ ರೂಪು–ರೇಷೆಗಳನ್ನು ಸಿದ್ದಪಡಿಸುವಲ್ಲಿ ರಾಜ್ಯ ಸರ್ಕಾರಕ್ಕೆ ಹಾಗೂ ಜನಪ್ರತಿನಿಧಿಗಳ ಪಾತ್ರವಿರಲಿಲ್ಲ. ಇದೀಗ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಈ ಸಮಿತಿಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆಯಾಗಿರುವ ರಾಜ್ಯದ ಆರು ನಗರಗಳ ಸಂಬಂಧಿತ ಜಿಲ್ಲಾ ಉಸ್ತವಾರಿ ಸಚಿವರೂ, ಸಂಸದರು, ಶಾಸಕರು, ಸ್ಥಳೀಯ ಸಂಸ್ಥೆಗಳ ಮಹಾಪೌರರು, ಪ್ರತಿಪಕ್ಷ ನಾಯಕರು ಹಾಗೂ ಆಯುಕ್ತರು ಇರುತ್ತಾರೆ ಎಂದು ಜಯಚಂದ್ರ ಅವರು ಮಾಹಿತಿ ನೀಡಿದರು.

************

ಡಿ ಪಿ ಎಂ